# ಕರ್ನಾಟಕ ಸರ್ಕಾರದ ನಡವಳಿ

**ವಿಷಯ:** ಶ್ರೀ ಎಸ್.ಮಲೆಯಪ್ಪ, ನಿವೃತ್ತ ಗ್ರೇಡ್-2 ಕಾರ್ಯದರ್ಶಿ, ಕುಣಗಳ್ಳಿ ಗ್ರಾಮ ಪಂಚಾಯತಿ, ಕೊಳ್ಳೇಗಾಲ ತಾಲ್ಲೂಕು, ಚಾಮರಾಜನಗರ ಜಿಲ್ಲೆ ರವರ ವಿರುದ್ಧ ಲೋಕಾಯುಕ್ತ ವಿಚಾರಣೆ- ಅಂತಿಮ ಆದೇಶ ಹೊರಡಿಸುವ ಕುರಿತು – ಆದೇಶ.

**ಓದಲಾಗಿದೆ:**

1. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/89/ಗ್ರಾಪಂಕಾ/2015, ದಿನಾಂಕ:12-03-2015.
2. ಅಪರ ನಿಬಂಧಕರು ವಿಚಾರಣೆಗಳು-11, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರು ಮಾನ್ಯ ಉಪಲೋಕಾಯುಕ್ತ ರವರಿಗೆ ಸಲ್ಲಿಸಿದ ವಿಚಾರಣಾ ವರದಿ ಸಂಖ್ಯೆ:UPLOK-2/DE/140/2015 ದಿನಾಂಕ: 23-09-2017.
3. ಮಾನ್ಯ ಉಪಲೋಕಾಯುಕ್ತ, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರ ಶಿಫಾರಸ್ಸು ಸಂಖ್ಯೆ: UPLOK-2/DE/140/2015/ARE-11 ದಿನಾಂಕ: 25-09-2017.
4. ಸರ್ಕಾರದ ಎರಡನೇ ಕಾರಣ ಕೇಳುವ ನೋಟೀಸ್ ಸಂಖ್ಯೆ:ಗ್ರಾಅಪ/759/ಗ್ರಾಪಂಕಾ/2017, ದಿನಾಂಕ: 08-11-2017.
5. ಶ್ರೀ ಎಸ್.ಮಲೆಯಪ್ಪ, ಇವರು ಸರ್ಕಾರದ ಎರಡನೇ ಕಾರಣ ಕೇಳುವ ನೋಟೀಸ್‌ಗೆ ನೀಡಿರುವ ಲಿಖಿತ ಹೇಳಿಕೆ ದಿ:30-11-2017.

**ಪ್ರಸ್ತಾವನೆ :**

ಮೇಲೆ ಕ್ರಮ ಸಂಖ್ಯೆ (1) ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಶ್ರೀ ಎಸ್.ಮಲೆಯಪ್ಪ, ಗ್ರೇಡ್-2 ಕಾರ್ಯದರ್ಶಿ, ಕುಣಗಳ್ಳಿ ಗ್ರಾಮ ಪಂಚಾಯತಿ, ಕೊಳ್ಳೇಗಾಲ ತಾಲ್ಲೂಕು, ಚಾಮರಾಜನಗರ ಜಿಲ್ಲೆ ಇವರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 14-A ರಡಿಯಲ್ಲಿ ಮಾನ್ಯ ಉಪಲೋಕಾಯುಕ್ತರಿಗೆ ವಹಿಸಲಾಯಿತು. ಅದರಂತೆ ಅಪರ ನಿಬಂಧಕರು, ವಿಚಾರಣೆಗಳು-7, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರು ಸದರಿಯವರ ವಿರುದ್ಧ ಈ ಕೆಳಕಂಡ ಆರೋಪದ ಮೇಲೆ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 11(9)ರ ಅಡಿಯಲ್ಲಿ ಇಲಾಖಾ ವಿಚಾರಣೆ ನಡೆಸಿರುತ್ತಾರೆ.

**"ದೋಷಾರೋಪಣೆ":**

ಶ್ರೀ ಎಸ್.ಮಲೆಯಪ್ಪ, ಗ್ರೇಡ್-2 ಕಾರ್ಯದರ್ಶಿ, ಕುಣಗಳ್ಳಿ ಗ್ರಾಮ ಪಂಚಾಯತಿ, ಕೊಳ್ಳೇಗಾಲ ತಾಲ್ಲೂಕು, ಚಾಮರಾಜನಗರ ಜಿಲ್ಲೆ ಇವರು ದೂರುದಾರರಾದ ಶ್ರೀ ಕಾಂತರಾಜು @ ಜಯಕಾಂತ್ ಬಿನ್ ಚಿಕ್ಕರಂಗಯ್ಯ, ಕುಣಗಳ್ಳಿ, ಚಾಮರಾಜನಗರ ಜಿಲ್ಲೆ ಇವರ ತಾಯಿ ಶ್ರೀಮತಿ ಚಿನ್ನಮ್ಮ ರವರಿಗೆ ಕುಣಗಳ್ಳಿ ಗ್ರಾಮ ಪಂಚಾಯತಿಯಲ್ಲಿ 2012-13 ನೇ ಸಾಲಿನಲ್ಲಿ ಇಂದಿರಾ ಆವಾಜ್ ಯೋಜನೆಯಡಿ ಮನೆ ಮಂಜೂರಾಗಿದ್ದು, ಸದರಿಯವರಿಗೆ ಹಣ ಮಂಜೂರು ಮಾಡಲು ರೂ.5,000/-ಗಳ ಲಂಚದ ಬೇಡಿಕೆ ಇಟ್ಟು, ಮುಂಗಡವಾಗಿ ರೂ.1,500/-ಗಳನ್ನು ಪಡೆದು, ದಿನಾಂಕ:11-3-2014ರಂದು ರೂ.3,500/- ಲಂಚದ ಹಣ ಸ್ವೀಕರಿಸುವಾಗ ಲೋಕಾಯುಕ್ತ ಪೋಲೀಸರ ಬಲೆಗೆ ಬಿದ್ದು ದುರ್ನಡತೆ ಎಸಗಿದ್ದು, ಸರ್ಕಾರಿ ಕರ್ತವ್ಯ ಪಾಲನೆಯಲ್ಲಿ ಸಂಪೂರ್ಣ ಪ್ರಾಮಾಣಿಕತೆ ಹಾಗೂ ನಿಷ್ಠೆ ತೋರದೆ ಮತ್ತು ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ಸದರಿಯವರು ಕರ್ನಾಟಕ ನಾಗರೀಕ ಸೇವಾ(ನಡತೆ) ನಿಯಮ 1966 ರ ನಿಯಮ 3(1)(ii) ಮತ್ತು (iii) ಅನ್ವಯ ದುರ್ನಡತೆ ಎಸಗಿರುತ್ತಾರೆ."

ವಿಚಾರಣಾಧಿಕಾರಿಗಳು ಮೇಲೆ ಕ್ರಮ ಸಂಖ್ಯೆ (2) ರಲ್ಲಿ ಓದಲಾದ ವರದಿಯಲ್ಲಿ ಶ್ರೀ ಎಸ್.ಮಲೆಯಪ್ಪ, ನಿವೃತ್ತ ಗ್ರೇಡ್-2 ಕಾರ್ಯದರ್ಶಿ, ಕುಣಗಳ್ಳಿ ಗ್ರಾಮ ಪಂಚಾಯತಿ, ಕೊಳ್ಳೇಗಾಲ ತಾಲ್ಲೂಕು, ಚಾಮರಾಜನಗರ ಜಿಲ್ಲೆ ಇವರ ವಿರುದ್ಧದ ಆರೋಪವು ಸಾಬೀತಾಗಿದೆಯೆಂದು ನಿರ್ಣಯಿಸಿರುತ್ತಾರೆ. ಈ ವರದಿಯನ್ನು ಮಾನ್ಯ ಉಪಲೋಕಾಯುಕ್ತ ರವರು ಅಂಗೀಕರಿಸಿ ಶ್ರೀ ಎಸ್.ಮಲೆಯಪ್ಪ, ನಿವೃತ್ತ ಗ್ರೇಡ್-2 ಕಾರ್ಯದರ್ಶಿ, ಕುಣಗಳ್ಳಿ ಗ್ರಾಮ ಪಂಚಾಯತಿ, ಕೊಳ್ಳೇಗಾಲ ತಾಲ್ಲೂಕು, ಚಾಮರಾಜನಗರ ಜಿಲ್ಲೆ ಇವರ ವಿರುದ್ಧ ಸಾಬೀತಾಗಿರುವ ಆರೋಪಕ್ಕೆ ಅನುಗುಣವಾಗಿ ಸದರಿಯವರಿಗೆ ಕರ್ನಾಟಕ ನಾಗರೀಕ ಸೇವಾ ನಿಯಮ 214 (1)(ಎ) ಅನುಸಾರ **"25% ನಿವೃತ್ತಿ ಸೌಲಭ್ಯಗಳನ್ನು ಶಾಶ್ವತವಾಗಿ ತಡೆಹಿಡಿಯುವ"** ದಂಡನೆ ವಿಧಿಸಲು ಮೇಲೆ ಕ್ರಮ ಸಂಖ್ಯೆ (3) ರಲ್ಲಿ ಓದಲಾದ ವರದಿಯಲ್ಲಿ ಶಿಫಾರಸ್ಸು ಮಾಡಿರುತ್ತಾರೆ.

ಈ ಸಂಬಂಧ ಶ್ರೀ ಶ್ರೀ ಎಸ್.ಮಲೆಯಪ್ಪ, ನಿವೃತ್ತ ಗ್ರೇಡ್-2 ಕಾರ್ಯದರ್ಶಿ ಇವರಿಗೆ ನಿಯಮಾನುಸಾರ ಕ್ರಮ ಸಂಖ್ಯೆ (4) ರಲ್ಲಿ ಓದಲಾದ ಸರ್ಕಾರದ ಪತ್ರದಲ್ಲಿ ವಿಚಾರಣಾಧಿಕಾರಿಯವರ ವರದಿ ಮತ್ತು ಮಾನ್ಯ ಉಪಲೋಕಾಯುಕ್ತ ರವರ ಶಿಫಾರಸ್ಸಿನ ಪ್ರತಿಯೊಂದಿಗೆ 2ನೇ ಕಾರಣ ಕೇಳುವ ನೋಟೀಸ್‌ನ್ನು ಜಾರಿಗೊಳಿಸಲಾಗಿತ್ತು. ಈ ನೋಟೀಸಿಗೆ ಅವರು ಮೇಲೆ ಕ್ರಮ ಸಂಖ್ಯೆ (5) ರಲ್ಲಿ ಓದಲಾದ ಮನವಿ ಮೂಲಕ ತಮ್ಮ ಲಿಖಿತ ಹೇಳಿಕೆ ಸಲ್ಲಿಸಿರುತ್ತಾರೆ.

ಆಪಾದಿತ ನೌಕರರು ಸರ್ಕಾರದ 2ನೇ ಕಾರಣ ಕೇಳುವ ನೋಟಿಸಿಗೆ ನೀಡಿರುವ ಲಿಖಿತ ಹೇಳಿಕೆಯಲ್ಲಿ ಈ ಕೆಳಕಂಡ ಪ್ರಮುಖ ಆಕ್ಷೇಪಣೆಗಳನ್ನು ಸಲ್ಲಿಸಿರುತ್ತಾರೆ.

"2012-13 ನೇ ಸಾಲಿನಲ್ಲಿ ಶ್ರೀಮತಿ ಚಿನ್ನಮ್ಮ ಕೋಂ ಚಿಕ್ಕರಂಗಯ್ಯ ನವರಿಗೆ ಇಂದಿರಾ ಆವಾಜ್ ಯೋಜನೆಯಡಿ ಮನೆ ನಿರ್ಮಾಣ ಮಾಡಲು ಕಾರ್ಯಾದೇಶವನ್ನು ಶ್ರೀ ನೀಲಯ್ಯನವರು ನೀಡಿದ್ದು, ಮನೆ ನಿರ್ಮಾಣ ಮಾಡುವ ಬಗ್ಗೆ ಯೋಜನೆಯ ಷರತ್ತುಗಳನ್ನು ವಿವರಿಸಲಾಗಿತ್ತು. ದೂರುದಾರರಿಗೆ ಈ ಪ್ರಕರಣದಲ್ಲಿ ಸಮಬಂಧಪಟ್ಟವರಲ್ಲ. ಯೋಜನೆಯ ನಿಯಮಗಳನ್ನು ಪಾಲಿಸದೇ ಫಲಾನುಭವಿಯ ಮಗ ಗ್ರಾಮ ಪಂಚಾಯತಿಯಲ್ಲಿ ಗಲಾಟೆ ಮಾಡಿ ಲೋಕಾಯುಕ್ತಕ್ಕೆ ಸುಳ್ಳು ದೂರು ಸಲ್ಲಿಸಿರುತ್ತಾರೆ. ದೂರುದಾರರು ದುರುದ್ದೇಶದಿಂದ ಹಣವನ್ನು ನನ್ನ ಜೇಬಿಗೆ ಇಟ್ಟಿರುತ್ತಾರೆ. ನನ್ನ ವಿರುದ್ಧದ ಕ್ರಮವನ್ನು ಕೈ ಬಿಡಬೇಕೆಂದು ಕೋರಿರುತ್ತಾರೆ".

ವಿಚಾರಣಾಧಿಕಾರಿಯವರು ತಮ್ಮ ವರದಿಯಲ್ಲಿ ಆಪಾದಿತರ ವಿರುದ್ಧದ ಆರೋಪಗಳನ್ನು ಸಾಬೀತು ಪಡಿಸಲು ತಮ್ಮ ವಿಚಾರಣಾ ವರದಿಯ ಪುಟ ಸಂಖ್ಯೆ 10 ರಿಂದ 18 ರ ವರೆಗೆ ಸಮರ್ಥವಾದ ಕಾರಣಗಳನ್ನು ನೀಡಿರುತ್ತಾರೆ.

It is well settled that in a prosecution for the offence punishable under sections 7 and 13(2) of The Prevention of Corruption Act, 1988, the prosecution is bound to establish that the accused facing criminal trial has to demand and accept money in order to extend official favour. It is also well settled that evidence of the complanaint in criminal trial necessarily has to be corroborated by the testimony of shadow witness and that charge has to be established beyond reasonable doubt. In the case on hand, yardstick of preponderance of propabilities has to be applied while appreciating evidence on record. When evidence on record is appreciated keeping in mind the rule of preponderance of propabilities it stands established that in order to extend official favour i.e., in the matter of release of cheque in favour of mother of complainant under Indira Awas Scheme DGO demanded and accepted tainted notes from the complainant.

To sum up, evidence of PWs 1to 3 establishes possession of tainted currency notes by DGO and seizure of those notes under trap mahazar in the official residence of DGO on 11-03-2014 between 4-15 PM and 4-40 PM. Evidence on record establishes that DGO accepted tainted notes in the matter of release of cheque in favour of mother of complainant under Indira Awas Scheme. Explanation offered by DGO as could be seen

from Ex P4 is nothing but self serving and therefore the said explanation is not worthy of credence and acceptance. Thus, charge against DGO as alleged in articles of charge at Annexure-I has remained established.

ಸರ್ಕಾರವು ಆಪಾದಿತರು 2ನೇ ಕಾರಣ ಕೇಳುವ ನೋಟೀಸಿಗೆ ನೀಡಿರುವ ಲಿಖಿತ ಹೇಳಿಕೆ ಮತ್ತು ವಿಚಾರಣಾ ನಡವಳಿ, ದಾಖಲೆಗಳು ಮತ್ತು ಸಾಕ್ಷ್ಯಾಧಾರಗಳನ್ನು ವಿವರವಾಗಿ ಪರಿಶೀಲಿಸಿದೆ. ವಿಚಾರಣಾಧಿಕಾರಿಯವರು ವಿವರವಾದ ಸಮರ್ಥನೆಯೊಂದಿಗೆ ಆರೋಪವನ್ನು ಸಾಬೀತುಪಡಿಸಿರುತ್ತಾರೆ. ಮಾನ್ಯ ಉಪಲೋಕಾಯುಕ್ತ ರವರು ವಿಚಾರಣಾ ವರದಿಯನ್ನು ಅಂಗೀಕರಿಸಿ ಆರೋಪದ ತೀವ್ರತೆಗೆ ಅನುಗುಣವಾಗಿ ಶ್ರೀ ಎಸ್.ಮಲೆಯಪ್ಪ, ನಿವೃತ್ತ ಗ್ರೇಡ್-2 ಕಾರ್ಯದರ್ಶಿ, ಕುಣಗಳ್ಳಿ ಗ್ರಾಮ ಪಂಚಾಯತಿ, ಕೊಳ್ಳೇಗಾಲ ತಾಲ್ಲೂಕು, ಚಾಮರಾಜನಗರ ಜಿಲ್ಲೆ ಇವರಿಗೆ ಕರ್ನಾಟಕ ನಾಗರೀಕ ಸೇವಾ ನಿಯಮ 214 (1)(ಎ) ಅನುಸಾರ **"25% ನಿವೃತ್ತಿ ಸೌಲಭ್ಯಗಳನ್ನು ಶಾಶ್ವತವಾಗಿ ತಡೆಹಿಡಿಯುವ"** ದಂಡನೆ ವಿಧಿಸಲು ಶಿಫಾರಸ್ಸು ಮಾಡಿರುತ್ತಾರೆ.

ವಿಚಾರಣಾಧಿಕಾರಿಯವರು ಆಪಾದನೆಯನ್ನು ಸಾಬೀತುಪಡಿಸಲು ತಮ್ಮ ವರದಿಯಲ್ಲಿ ವಿವರವಾದ ಕಾರಣಗಳನ್ನು ನೀಡಿರುತ್ತಾರೆ. ಸದರಿ ಕಾರಣಗಳು ಸಮರ್ಥನೀಯವಾಗಿರುತ್ತದೆ. ಆದುದರಿಂದ ಶ್ರೀ ಎಸ್.ಮಲೆಯಪ್ಪ, ನಿವೃತ್ತ ಗ್ರೇಡ್-2 ಕಾರ್ಯದರ್ಶಿ, ಇವರು 2ನೇ ಕಾರಣ ಕೇಳುವ ನೋಟೀಸಿಗೆ ನೀಡಿರುವ ಹೇಳಿಕೆ ಸಮರ್ಥನೀಯವಲ್ಲವೆಂದು ಕಂಡುಬಂದಿರುತ್ತದೆ. ಆದುದರಿಂದ ಸರ್ಕಾರವು ವಿಚಾರಣಾ ವರದಿ ಹಾಗೂ ಮಾನ್ಯ ಉಪಲೋಕಾಯುಕ್ತ ರವರ ಶಿಫಾರಸ್ಸನ್ನು ಪರಿಶೀಲಿಸಿ ಶ್ರೀ ಶ್ರೀ ಎಸ್.ಮಲೆಯಪ್ಪ, ನಿವೃತ್ತ ಗ್ರೇಡ್-2 ಕಾರ್ಯದರ್ಶಿ, ಕುಣಗಳ್ಳಿ ಗ್ರಾಮ ಪಂಚಾಯತಿ, ಕೊಳ್ಳೇಗಾಲ ತಾಲ್ಲೂಕು, ಚಾಮರಾಜನಗರ ಜಿಲ್ಲೆ ಇವರಿಗೆ ಕರ್ನಾಟಕ ನಾಗರೀಕ ಸೇವಾ ನಿಯಮ 214 (1)(ಎ) ಅನುಸಾರ **"25% ನಿವೃತ್ತಿ ಸೌಲಭ್ಯಗಳನ್ನು ಶಾಶ್ವತವಾಗಿ ತಡೆಹಿಡಿಯುವ"** ದಂಡನೆ ವಿಧಿಸಲು ನಿರ್ಣಯಿಸಿದೆ.

ಅದರಂತೆ ಈ ಆದೇಶ.

**<u>ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/759/ಗ್ರಾಪಂಕಾ/2017, ಬೆಂಗಳೂರು, ದಿನಾಂಕ:09-04-2018.</u>**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರವು ಶ್ರೀ ಎಸ್.ಮಲೆಯಪ್ಪ, ನಿವೃತ್ತ ಗ್ರೇಡ್-2 ಕಾರ್ಯದರ್ಶಿ, ಕುಣಗಳ್ಳಿ ಗ್ರಾಮ ಪಂಚಾಯತಿ, ಕೊಳ್ಳೇಗಾಲ ತಾಲ್ಲೂಕು, ಚಾಮರಾಜನಗರ ಜಿಲ್ಲೆ ಇವರಿಗೆ ಕರ್ನಾಟಕ ನಾಗರೀಕ ಸೇವಾ ನಿಯಮ 214 (1)(ಎ) ಅನುಸಾರ **"25% ನಿವೃತ್ತಿ ಸೌಲಭ್ಯಗಳನ್ನು ಶಾಶ್ವತವಾಗಿ ತಡೆಹಿಡಿಯುವ"** ದಂಡನೆ ವಿಧಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

10/4

(ಮುಬಾರಕ್ ಅಹ್ಮದ್)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

**<u>ಗೆ,</u>**

1. ಮಹಾಲೇಖಪಾಲರು, ಕರ್ನಾಟಕ ಬೆಂಗಳೂರು.
2. ಮಾನ್ಯ ಉಪಲೋಕಾಯುಕ್ತ ರವರು ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
3. ಅಪರ ನಿಬಂಧಕರು, ವಿಚಾರಣೆಗಳು-11, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
4. ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.

5.ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಚಾಮರಾಜನಗರ ಜಿಲ್ಲೆ.
6.ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ ಕೊಳ್ಳೇಗಾಲ, ಚಾಮರಾಜನಗರ ಜಿಲ್ಲೆ.
7.ಶ್ರೀ ಎಸ್.ಮಲೆಯಪ್ಪ, ನಿವೃತ್ತ ಗ್ರೇಡ್-2 ಕಾರ್ಯದರ್ಶಿ, ಕುಣಗಳ್ಳಿ ಗ್ರಾಮ ಪಂಚಾಯತಿ, ಕೊಳ್ಳೇಗಾಲ ತಾಲ್ಲೂಕು, ಚಾಮರಾಜನಗರ ಜಿಲ್ಲೆ.
8.ಗಣಕ ಕೋಶ.
9.ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.